ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 27.04.2021

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 28-04-2021 ರಿಂದ 02-05-2021ವರೆಗೆ)

| ನಿಯತಾಂಕಗಳು | 28.04.2021 | 29.04.2021 | 30.04.2021 | 01.05.2021 | 02.05.2021 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 34 | 34 | 35 | 35 | 34 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 22 | 22 | 22 | 22 | 21 |
| ಮೋಡ (ಪ್ರಮಾಣ) | 3 | 3 | 3 | 3 | 4 |
| ಅರ್ದ್ರತೆ 7.20 ಬೆ (ಶೇ) | 78 | 78 | 78 | 76 | 76 |
| ಅರ್ದ್ರತೆ 2.20 ಮ (ಶೇ) | 37 | 37 | 36 | 35 | 34 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 4 | 4 | 4 | 5 | 5 |
| ಗಾಳಿಯ ದಿಕ್ಕು ( ಡಿಗ್ರಿ) | 158 | 68 | 105 | 155 | 135 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆ0ಯಾಗುವ ಸಾಧ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **34.0-35.0°C** ಮತ್ತು ಕನಿಷ್ಠ **21.0-22.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **76-78 %** ಇದ್ದು ಮಧ್ಯಾಹ್ನ **34-37 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-5** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ➢ ಭರಣಿ ನಕ್ಷತ್ರದ ಮಳೆಯ ಕಾಲವು ಏಪ್ರಿಲ್ ತಿಂಗಳ 27 ರಿಂದ ಮೇ 10 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 30.7 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ **ಈ ವರ್ಷದ ಮುಂಗಾರು** ದೇಶದಾದ್ಯಂತ ಒಟ್ಟಾರೆಯಾಗಿ **ಸಾಮಾನ್ಯವಾಗಿದ್ದು**, ದೀರ್ಘಾವಧಿ ಸರಾಸರಿಯು 98 % ಇರಬಹುದೆಂದು ಅಂದಾಜಿಸಲಾಗಿದೆ.<br>➢ **2 ನೇ ಹಂತದ ಮುನ್ಸೂಚನೆ – ಮೇ ಕೊನೆಯ ವಾರದಲ್ಲಿ** : ನವೀಕರಿಸಿದ ಮುಂಗಾರು ಮುನ್ಸೂಚನೆ, ಜೂನ್ ತಿಂಗಳಿನ ಮಳೆಯ ಸಾದ್ಯತೆ ಮತ್ತು ಮುಂಗಾರು ಕೇರಳವನ್ನು ಪ್ರವೇಶಿಸುವ ದಿನಾಂಕವನ್ನು ಮೇ ಕೊನೆಯ ವಾರದಲ್ಲಿ ನೀಡಲಾಗುವುದು.<br>➢ ಬೇಸಿಗೆ ಉಳುಮೆ ಮಾಡುವುದರಿಂದ ಹುಳುಗಳ ವಿವಿಧ ಹಂತಗಳನ್ನು ನಾಶಪಡಿಸಬಹುದು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.<br>➢ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸರಾಸರಿ 36 ಮತ್ತು 93 ಮಿ.ಮೀ ಇರುವುದರಿಂದ ಎರಡುಬೆಳೆ ಪದ್ಧತಿಯಲ್ಲಿ ಮೊದಲ ಬೆಳೆಯಾಗಿ, ಈ ಕೆಳಗಿನ ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.<br>ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ: ಎಚ್.ಎ–1,2,3 ಮತ್ತು 4<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು<br>➢ ಪೂರ್ವ ಮುಂಗಾರಿಗೆ ಅಲಸಂದೆ, ಎಳ್ಳು ಮತ್ತು ಅವರೆ ಬಿತ್ತನೆ ಬೀಜಗಳನ್ನು ಸಿದ್ಧತೆಗಳನ್ನು ಮಾಡಿಕೊಳ್ಳಿ,<br>➢ ಹಿಂಗಾರಿ ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.<br>➢ ತರಕಾರಿ ಮತ್ತು ಹಣ್ಣಿನ ಬೆಳೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆಯನ್ನು ಮಾಡಿ ಹನಿ ನೀರಾವರಿ ಕೊಡುವುದರಿಂದ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಮತ್ತು ಕಳೆಗಳ ನಿಯಂತ್ರಣವಾಗುತ್ತವೆ. |
| ಮಾವು | ➢ ವಿಕೃತ ಹೂ ಗೊಂಚಲು ರೋಗವನ್ನು ಹತೋಟಿ ಮಾಡಲು, ರೋಗ ಬಂದ ರೆಂಬೆಗಳು ಮತ್ತು ಹೂ ಗೊಂಚಲುಗಳನ್ನು ಕತ್ತರಿಸಿ ನಾಶಪಡಿಸಬೇಕು. ಅನಂತರ 1 ಗ್ರಾಂ ಕಾರ್ಬೆಂಡಜಿಂ ಒಂದು ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಮರದ ಅಲ್ಲಾ ಭಾಗಕ್ಕೆ ಸಿಂಪಡಿಸಿ. |

| | |
|---|---|
| | ➢ ಮಾವಿನಲ್ಲಿ ಕಾಯಿಗಳು ಉದುರುವುದನ್ನು ತಡೆಗಟ್ಟಲು ಗೊಟ್ಟೆ ಹಂತದಲ್ಲಿ ನ್ಯಾಪ್ತಲಿನ್ ಅಸಿಟಿಕ್ ಆಸಿಡ್ 20 ಪಿ.ಪಿ.ಎಮ್. 15 ದಿನಗಳಿಗೊಮ್ಮೆ 2 ಬಾರಿ ಕೊಡುವುದು |
| | **ಹೈನುಗಾರಿಕೆ** |
| **ಪಶುಸಂಗೋಪನೆ** | **ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>➢ ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>➢ ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>➢ ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಆಡುವಂತೆ ವ್ಯವಸ್ಥೆ ಮಾಡಬೇಕು.<br>➢ ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |
| **ಕೋಳಿ ಸಾಕಾಣಿಕೆ** | **ಬೇಸಿಗೆ ತಿಂಗಳಿನಲ್ಲಿ ಕೋಳಿ ಸಾಕಾಣಿಕೆ ಸಲಹೆಗಳು :**<br>ಸರಾಸರಿ ಉಷ್ಣಾಂಶ 33–36 $^{o}$**C ,** ಸರಾಸರಿ ಆರ್ದ್ರತೆ ಪ್ರಮಾಣ, < 50 % (RH) **ಮತ್ತು** ಸರಾಸರಿ ಗಾಳಿಯ ವೇಗ < 5 ಕಿ.ಮೀ/ಘಂಟೆಗೆ<br>➢ ನೀರಿನ ಟ್ಯಾಂಕ್ ನ ಮೇಲ್ಭಾವಣಿಯನ್ನು ಒದ್ದೆಯಾದ ಗೋಣಿ ಚೀಲದಲ್ಲಿ ಮುಚ್ಚಿಡಬೇಕು ಇದರಿಂದ ನೀರು ಬಿಸಿಯಾಗುವುದನ್ನು ತಡೆಯಬಹುದು.<br>➢ ಬೇಸಿಗೆ ಹೆಚ್ಚಾಗಿರುವುದರಿಂದ ಕೋಳಿಗಳಿಗೆ ಬೆಳಗಿನ ಜಾವ ಮತ್ತು ಸಂಜೆ ವೇಳೆಯಲ್ಲಿ ನೀರನ್ನು ಯತೇಚ್ಛವಾಗಿ ಕೊಡಬೇಕು.<br>➢ ಕಿಟಕಿಯಲ್ಲಿ ಗಾಳಿಯು ಸರಾಗವಾಗಿ ಬೀಸುವ ಹಾಗೆ ನೋಡಿಕೊಳ್ಳಬೇಕು<br>➢ ಪೆಡೆಸ್ಟ್ರಾನ್ ಫ್ಯಾನ್ ಮೂಲಕ ಬಿಸಿ ಗಾಳಿಯು ಹೊರಹೊಗುವಂತೆ ನೋಡಿಕೊಳ್ಳಬೇಕು. |


**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಫ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.